ಮಾತಿಲ್ಲದ ಮಾತು, ಮಧ್ಯೆ ಜನಿಸುತ್ತಿರುವ ಹೊಸ ಜೀವ, ಅದರ ಸುತ್ತಲೂ ಹರಡಿದ ದಟ್ಟ, ಗಾಢ ರಕ್ತ. ನನಗೆ ನೋಡಲು, ಸಹಿಸಲು ಆಗಲಿಲ್ಲ. ಆ ದುರಂತ, ಅದರೊಳಗಿನ ಭಾವತನ್ಮಯತೆ, ಎರಡು ದೇಶಗಳ ಬಾಂಧವ್ಯಕ್ಕೆ ಫೇರ್‌ವೆಲ್, ಯುದ್ಧದ ದ್ವೇಷಕ್ಕೆ, ಶಸ್ತ್ರಾಸ್ತ್ರಗಳಿಗೆ ಫೇರ್‌ವೆಲ್, ಇಬ್ಬರ ಪ್ರೇಮಕ್ಕೆ ವಿದಾಯ, ಫೇರ್‌ವೆಲ್, ಈ ವಿದಾಯದ ಕೂಸಾಗಿ ಅವತರಿಸಿದ್ದ ಹೊಸ ಯುಗದ ಜೀವಕ್ಕೆ ಎಂಥ ವಿದಾಯ, ಎಂಥ ಸ್ವಾಗತ... ಮುಂದೆ ನೋಡುವುದಾಗಲಿಲ್ಲ. ಇಬ್ಬರೂ ಗೆಳೆಯರ ನಡುವೆ ಕುಳಿತಿದ್ದೆ. ಕುಳಿತಲ್ಲಿಯೇ ಬವಳಿ ಬಂದು ಕೆಳಗೆ ತಲೆ ತಗ್ಗಿಸಿದೆ. ತಕ್ಷಣ ಇಬ್ಬರೂ ಹಿಡಿದುಕೊಂಡರು. ಸಿನಿಮಾ ಮುಗಿದೊಡನೆ ಕರೆದುಕೊಂಡು ಹೊರಗೆ ನಿಲ್ಲಿಸಿ, ಮುಖಕ್ಕೆ ಸ್ವಲ್ಪ ನೀರು ಚಿಮ್ಮಿದರು. ಅಷ್ಟರಲ್ಲಿ ಸಾವರಿಸಿಕೊಂಡಿದ್ದೆ. ನಾನು ಮನೆಗೆ ಹೋಗುತ್ತೇನೆ, ನೀವು ಹೋಗಿರಿ ಅಂದೆ. ಗಿರಡ್ಡಿ ಬಿಡಬೇಕಲ್ಲ... ಹೊರಗೆ ಬಂದು, ನಾನು ಬೇಡವೆಂದರೂ, ನನ್ನನ್ನು ಜಬರಿಸಿ, ಒಂದು ಟಾಂಗಾ ಮಾಡಿದ. ಮನೆಮುಂದೆ ನನ್ನ ತೋಳು ಹಿಡಿದುಕೊಂಡು ಟಾಂಗಾದಿಂದ ಇಳಿಸಿಕೊಂಡ. ಗೆಳೆಯರು ಮಗನನ್ನು ಟಾಂಗಾದಲ್ಲಿ ಕರೆತಂದದ್ದನ್ನು ನೋಡಿ ಅವ್ವ ಗಾಬರಿಯಾಗಿ ಅಳತೊಡಗಿದಳು. ಇಬ್ಬರೂ ಒಳಗೆ ಬಂದು ನನ್ನನ್ನು ಹಾಸಿಗೆಯ ಮೇಲೆ ಕೂಡಿಸಿದರು, ಏನೂ ಆಗಿಲ್ಲ, ಅರಾಮಿದ್ದಾನೆ ಎಂದು ಅವ್ವನಿಗೆ ಸಮಾಧಾನ ಹೇಳಿ, ಸ್ವಲ್ಪ ಹೊತ್ತು ಇದ್ದು ಹೋದರು. ಅದರ ಮರುದಿನದಿಂದ ಮತ್ತೆ ಗಿರಡ್ಡಿಯ ಚೇಷ್ಟೆ ಶುರುವಾಯಿತು. "ಮಾರಾಯಾ, ಇನ್ನ ಮುಂದ ನಮ್ಮ ಕೂಡ ಸಿನೆಮಾಕ್ಕ ಬರಬ್ಯಾಡ" ಎನ್ನುತ್ತ ಸುತ್ತಲಿದ್ದವರಿಗೆಲ್ಲ ಅಂದಿನ ಕತೆ ಹೇಳುತ್ತಿದ್ದ, ಆ ಪ್ರಸಂಗವೂ ಈಗ ಅವನ ನಗೆಯ ಭಾಗವೇ ಆಗಿ ಉಳಿಯಿತು. ಎಂಥ ವಿಷಯವನ್ನೂ ತನ್ನ ಹಾಸ್ಯ, ನಗೆಯ ಭಾಷೆಗೆ ಅನುವಾದಿಸಿಕೊಂಡು ನಗುವುದು, ಸಂಗಾತಿಗಳನ್ನು ನಗಿಸುವುದು ಅವನ ಸಹಜ ಧರ್ಮವಾಗಿತ್ತು.

ಚಂಪಾ ನಮಗಿಂತ ಒಂದು ವರ್ಷ ಮುಂದಿನ ಕ್ಲಾಸಿನಲ್ಲಿ ಇದ್ದ, ಅವನು ಪ್ರಿನ್ಸಿಪಲ್ ಎಕನಾಮಿಕ್ಸ್ ತೆಗೆದುಕೊಂಡಿದ್ದ. ಆದರೆ, ಭಾಷಣ ಸ್ಪರ್ಧೆಗಳಲ್ಲಿ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ನಾವೆಲ್ಲರೂ ಕೂಡಿಯೇ ಇರುತ್ತಿದ್ದೆವು. ಗೋಕಾಕರ ಸಲಹೆಯಂತೆ ನಮ್ಮ ಕಾಲೇಜಿನಲ್ಲಿ ಆರಂಭಿಸಲಾದ 'ಕಮಲಮಂಡಲ'ವನ್ನು ಸರಿಯಾಗಿ, ನಿಯಮಿತವಾಗಿ ನಡೆಸಿಕೊಂಡು ಹೋಗುವಲ್ಲಿ ಪ್ರೊ. ಎಸ್.ಆರ್. ಮಳಗಿಯವರಿಗೆ ಅತ್ಯಧಿಕವಾಗಿ ನೆರವಾದವನು ಗಿರಡ್ಡಿ. ಈಗಾಗಲೇ ನಮ್ಮ ಕಾಲೇಜು ಸೇರುವ ಮೊದಲೇ, ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗಲೇ 'ಶಾರದಾಲಹರಿ' ಹೆಸರಿನ ಒಂದು ಕವನಸಂಗ್ರಹ ಪ್ರಕಟಿಸಿದ್ದ. ಅದು ಮತ್ತು ಕನ್ನಡ ಸಾಹಿತ್ಯದ ಕಡೆಗೆ ಇದ್ದ ಸಹಜದ ಒಲವು ಅವನನ್ನು ಬಹಳ ಮುಂಚೂಣಿಯಲ್ಲಿ ನಿಲ್ಲಿಸಿತ್ತು.

ಗೋಕಾಕರ ಮನೆಯಲ್ಲಿ ಪ್ರತಿ ರವಿವಾರ ನಡೆಯುತ್ತಿದ್ದ ಚರ್ಚೆ, ವಾಚನ, ಹರಟೆಗಳಲ್ಲಿ ಸಹ ಗಿರಡ್ಡಿಯದೇ ನೇತೃತ್ವ. ಅವನೊಡನೆ ಚಂಪಾ, ಪಿ.ಎಂ. ಹೆಗಡೆ, ಜಿ.ಎ. ಜಾಲೀಹಾಳ ಮುಂತಾದವರು. ಎಸ್.ಆರ್. ಮಳಗಿಯವರ ಸಹಕಾರದಲ್ಲಿ ಅಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಕನ್ನಡವೇ ಪ್ರಾಧಾನ್ಯ ಪಡೆದದ್ದು ಗಿರಡ್ಡಿಯ ಕನ್ನಡ ಬೇರುಗಳಿಗೆ ನೀರೆರೆದಿತ್ತು. ಬಿ.ಎ. ಮುಗಿಸುವ ಹೊತ್ತಿಗೆ ನಮ್ಮ ಕಾಲೇಜಿನ ಕಮಲಮಂಡಲದಿಂದ ಪ್ರಕಟಿಸಿದ 'ಭೃಂಗನಾದ' ಮುಂತಾದ ಪುಸ್ತಕಗಳ ಸಂಪಾದನೆಯ ಹಿಂದೆ ಗಿರಡ್ಡಿಯ ಶ್ರಮವೇ ದುಡಿದಿತ್ತು.

ಇದೆಲ್ಲದರ ಪರಿಣಾಮವಾಗಿ ಗದಗದಲ್ಲಿ ಕೆ.ಜಿ. ಕುಂದಣಗಾರರು ಅಧ್ಯಕ್ಷರಾಗಿದ್ದ ಸಾಹಿತ್ಯ ಸಮ್ಮೇಳನಕ್ಕೆ ಎಂ.ಎಂ. ಕಲಬುರ್ಗಿ, ಚಂಪಾ, ಎನ್.ಎಸ್. ಹಿರೇಮಠ, ಶಿಗ್ಲಿ ಮಹಾದೇವ, ಪಿ.ಎಂ. ಹೆಗಡೆ, ಇಮ್ರಾಪುರ ಮುಂತಾದ ಗೆಳೆಯರು ಕೂಡಿಕೊಂಡು ಹೋಗಿದ್ದೆವು. ಅದು ನಾನು ನೋಡಿದ ಮೊದಲ ಸಾಹಿತ್ಯ ಸಮ್ಮೇಳನ. ಅದರಲ್ಲಿ ಗಿರಡ್ಡಿ ಮತ್ತು ಚಂಪಾ ಇಬ್ಬರೂ ಕಾವ್ಯವಾಚನ ಮಾಡಿದ್ದರು. ಆ ಸಮ್ಮೇಳನ ಮುಗಿಸಿಕೊಂಡು ನಾವು ಬೆಳವಣಿಕೆ, ರೋಣ, ಅಬ್ಬಿಗೇರಿಗೆ ಹೋದೆವು. ಗಿರಡ್ಡಿ ತಾನು